ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 20/2016

(ಫ್ರಾಸಾ-5 ಚಾಸಾ-19)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 04.02.2026

| | | |
|---|---|---|
| ಸಾಕ್ಷಿದಾರರ ಹೆಸರು | - | ನರೇಂದ್ರ ಬಾಬು ಎಂ. ಆರ್. |
| ತಂದೆಯ ಹೆಸರು | - | ಕೆ. ರಾಜೇಂದ್ರ |
| ವಯಸ್ಸು | - | 40 ವರ್ಷ, |
| ಉದ್ಯೋಗ | - | ಪಿಐ,<br>ನೆಲಮಂಗಲ ಗ್ರಾಮಾಂತರ ಪೋಲಿಸ್ ಠಾಣೆ |
| ವಾಸ | - | ನೆಲಮಂಗಲ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ದಿನಾಂಕ 07.01.2014 ರಿಂದ ದಿನಾಂಕ 04.04.2016 ರವರೆಗೆ ಬನ್ನೇರುಘಟ್ಟ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಸಬ್ ಇನ್ಸಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದೆನು. ದಿನಾಂಕ 11.06.2015 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 04.00 ಘಂಟೆ ಸಮಯದಲ್ಲಿ ಚಾಸಾ-1 ಠಾಣೆಗೆ ಹಾಜರಾಗಿ ಡಿವೈಎಸ್ಪಿ ಕಛೇರಿಯಲ್ಲಿ ದೂರು ನೀಡಿ ಸದರಿ ದೂರಿನಲ್ಲಿ ಪಡೆದ ಹಿಂಬರದೊಂದಿಗಿನ ದೂರನ್ನು ತಂದು ನನ್ನ ಮುಂದೆ ಹಾಜರುಪಡಿಸಿದ್ದು ಸದರಿ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 119/2015 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ನೊಂದಾಯಿಸಿರುತ್ತೇನೆ. ದೂರು ಮತ್ತು ಪ್ರ.ವ.ವರದಿಯನ್ನು ಠಾಣಾ ಸಿಬ್ಬಂದಿಯ ಮುಖಾಂತರ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು ಪ್ರತಿಗಳನ್ನು ಹಿರಿಯ ಅಧಿಕಾರಿಗೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಈ ಪ್ರಕರಣವು ಎಸ್ ಸಿ ಎಸ್ ಟಿ ಪ್ರಕರಣವಾದ್ದರಿಂದ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-20 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿ ದೂರು ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ದೂರು ಈಗಾಗಲೇ ನಿಪಿ-1 ಎಂದು ಗುರ್ತಿಸಲಾಗಿದ್ದು, ನಿಪಿ-1 ದೂರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-1(ಬಿ) ಎಂದು ಗುರ್ತಿಸಲಾಯಿತು. ಪ್ರ.ವ.ವರದಿಯನ್ನು

ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಪ್ರ.ವ.ವರದಿಯನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-3(ಎ) ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಪಿ ವಕೀಲರಿಂದಃ</u>**

2. ನಿಪಿ-1 ದೂರನ್ನು ಚಾಸಾ-1 ಇವರು ಎಲ್ಲಿಂದ ಬೆರಳಚ್ಚು ಮಾಡಿಸಿಕೊಂಡು ಬಂದರು ನನಗೆ ಗೊತ್ತಿಲ್ಲ. ಆರೋಪಿಯು ದುಡ್ಡು ಬೇಕೆಂದು ಚಾಸಾ-1 ಇವರ ಗಂಡನನ್ನು ಕೇಳುತ್ತಿದ್ದರು ಎಂದು ನಿಪಿ-1 ದೂರಿನಲ್ಲಿ ಚಾಸಾ-1 ಇವರು ಹೇಳಿರುವುದಿಲ್ಲ. ಜೂನ್ 11 ನೇ ತಾರೀಖಿನಂದು 4 ಘಂಟೆಗೆ ಆರೋಪಿ ರೌಡಿಗಳನ್ನು ಕರೆದುಕೊಂಡು ಬಂದು ಗಲಾಟೆ ಮಾಡಿದ ಬಗ್ಗೆ ದೂರಿನಲ್ಲಿ ನಮೂದು ಇಲ್ಲ ಎಂದರೆ ಸರಿ. ಮನೆಯಲ್ಲಿರುವ ಸಾಮಾನುಗಳನ್ನು ಮನೆಯಿಂದ ಹೊರಗೆ ಹಾಕಿ ತಮ್ಮನ್ನು ಮನೆಯಿಂದ ಹೊರಗೆ ಹಾಕಿದ್ದರಿಂದ ದೇವಸ್ಥಾನದಲ್ಲಿ ತಾವು ರಾತ್ರಿಯನ್ನು ಕಳೆದವು ಎಂದು ನಮೂದು ಇದೆಯೋ ಎಂದು ಕೇಳಲಾಗಿ ಸಾಕ್ಷಿ ದೇವಸ್ಥಾನದಲ್ಲಿ ಕಳೆದೆವು ಎನ್ನುವುದನ್ನು ಹೊರತುಪಡಿಸಿ ಉಳಿದದ್ದು ದೂರಿನಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಆರೋಪಿ ನನ್ನ ಸೀರೆ ಹಿಡಿದು ಎಳೆದಾಡಿದ್ದನು ಎಂದು ಚಾಸಾ-1 ಇವರು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಘಟನೆ ಸಮಯದಲ್ಲಿ ಊರಿನ ಸಾಕಷ್ಟು ಜನ ಸೇರಿದ್ದರು ಹಾಗೂ ಆರೋಪಿತರು ಹೆದರಿಸಿದ್ದರಿಂದ ಯಾರೂ ನಮ್ಮ ಸಹಾಯಕ್ಕೆ ಬಂದಿರಲಿಲ್ಲ ಎಂದು ಚಾಸಾ-1 ಇವರು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು